ಕ್ವಾರ್ಟರ್ಸ್‌ಗಳ ಕಾರ್ ಷೆಡ್ ನಿರ್ಮಾಣ, ರಸ್ತೆಗಳ ಸುಧಾರಣೆ, ಮಾನಸಿಕ ಆರೋಗ್ಯ ಸಂಸ್ಥೆ ಕಟ್ಟಡಗಳ ಸುಧಾರಣೆ, ಕಾಲೇಜು ಆಸ್ಪತ್ರೆ ಮತ್ತು ಓ.ಪಿ.ಡಿ ಕಟ್ಟಡದಲ್ಲಿ ಅಭಿವೃದ್ಧಿ ಮತ್ತು ಸುಧಾರಣೆ.

ಇ) ಇಲ್ಲ.

ಮಾಹಿತಿ ಸಿಂಧು ಯೋಜನೆ

259 (530) ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) - ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಮಾಹಿತಿ ಸಿಂಧು ಯೋಜನೆಯಡಿ ಕಂಪ್ಯೂಟರ್ ಶಿಕ್ಷಣ ನೀಡಲು ಎಷ್ಟು ಜನ ಶಿಕ್ಷಕರನ್ನು ನೇಮಿಸಿಕೊಳ್ಳಲಾಗಿದೆ ;

ಆ) ಇವರುಗಳಿಗೆ ಸೂಕ್ತ ವೇತನ ಹಾಗೂ ಇನ್ನಿತರ ಸೌಲಭ್ಯಗಳನ್ನು ನೀಡದೆ ಅನ್ಯಾಯ ಮಾಡಿರುವುದು ನಿಜವೆ ;

ಇ) ಈ ಶಿಕ್ಷಕರುಗಳನ್ನು ನೇರವಾಗಿ ಸರ್ಕಾರವೇ ನೇಮಿಸಿಕೊಳ್ಳುತ್ತಿದೆಯೇ ; ಅಥವಾ ಯಾವುದಾದರೂ ಏಜೆನ್ಸಿಯವರಿಂದ ನೇಮಿಸಿಕೊಳ್ಳಲಾಗುತ್ತಿದೆಯೆ ;

ಈ) ಉಚಿತ ಕಂಪ್ಯೂಟರ್ ಶಿಕ್ಷಣ ನೀಡಲು ವಿಶ್ವಬ್ಯಾಂಕ್‌ನಿಂದ ಪಡೆದಿರುವ ಸಾಲ ಎಷ್ಟು? ಈ ಹಣದಲ್ಲಿ ಭಾರಿ ಅವ್ಯವಹಾರವಾಗಿರುವುದು ನಿಜವೆ ;

ಉ) ರಾಜ್ಯದ ಎಷ್ಟು ಶಾಲೆಗಳಲ್ಲಿ ವಿದ್ಯಾರ್ಥಿಗಳಿಗೆ ಕಂಪ್ಯೂಟರ್ ತರಬೇತಿ ನೀಡಲಾಗುತ್ತಿದೆ; (ಜಿಲ್ಲಾವಾರು ವಿವರ ನೀಡುವುದು) ?

ಪ್ರೊ।। ಬಿ.ಕೆ. ಚಂದ್ರಶೇಖರ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು)

ಅ) ಸರ್ಕಾರದ ವತಿಯಿಂದ ಯಾವುದೇ ಶಿಕ್ಷಕರನ್ನೂ ನೇಮಿಸಲಾಗಿಲ್ಲ.

ಆ) ಇಲ್ಲ

ಇ) ಮಾಹಿತಿ ಸಿಂಧು ಯೋಜನೆಯಡಿ ಕಂಪ್ಯೂಟರ್ ಶಿಕ್ಷಣ ನೀಡುವ ಕಾರ್ಯವನ್ನು ಈ ಕೆಳಕಂಡ ಸಂಸ್ಥೆಗಳು ನಿರ್ವಹಿಸುತ್ತಿವೆ.

1) ಮೆ: ಎನ್.ಐ.ಐ.ಟಿ - 700 ಶಾಲೆಗಳು

2) ಮೆ : ಆಪ್ಟೆಕ್ ಲಿಮಿಟೆಡ್ - 250 ಶಾಲೆಗಳು

3) ಮೆ : ಎಡುಕಾಂಪ್ ಡಾಟಾಮ್ಯಾಟಿಕ್ಸ್ ಲಿಮಿಟೆಡ್ - 50 ಶಾಲೆಗಳು

ಈ ಸಂಸ್ಥೆಗಳು ನಿಗಧಿತ ವಿದ್ಯಾರ್ಹತೆ (ಬಿ.ಇ. ಎಂ.ಸಿ.ಇ. : ಬಿಎಸ್‌ಸಿ 1 ವರ್ಷದ ಕಂಪ್ಯೂಟರ್ ತರಬೇತಿ) ಹೊಂದಿರುವ ಶಿಕ್ಷಕರ ಮೂಲಕ ಕಂಪ್ಯೂಟರ್ ಶಿಕ್ಷಣ ನೀಡುತ್ತಿದ್ದಾರೆ.

ಈ) ಮಾಹಿತಿ ಸಿಂಧು ಕಾರ್ಯಕ್ರಮಕ್ಕೆ ವಿಶ್ವಬ್ಯಾಂಕ್‌ನಿಂದ ಯಾವುದೇ ಸಾಲ ಪಡೆದಿರುವುದಿಲ್ಲ ಮತ್ತು ಯಾವುದೇ ಅವ್ಯವಹಾರ ಆಗಿರುವುದಿಲ್ಲ.

ಉ) ರಾಜ್ಯದ 1000 ಸರ್ಕಾರಿ ಪ್ರೌಢಶಾಲೆಗಳಲ್ಲಿ ಕಂಪ್ಯೂಟರ್ ಶಿಕ್ಷಣ ಜಾರಿಗೊಳಿಸಲಾಗುತ್ತಿದೆ. ವಿವರವನ್ನು ಅನುಬಂಧದಲ್ಲಿ ಲಗತ್ತಿಸಿದೆ.

ANNEXURE

Districtwise number of schools agencywise no. of schools to NIIT 39/2, 1st floor, Banneraghatta road, Bangalore.

Sl No	Name of district	Cat A	Cat B	Cat C	Total
1	Bangalore (N)	7	6	9	22
2	Bangalore Rural	9	5	31	45
3	Chitradurga	7	12	14	33
4	Davanagere	9	11	19	39
5	Shimoga	10	14	19	43
6	Tumkur	6	21	32	59
7	Mysore	3	4	36	43
8	Udupi	2	7	11	20
9	Mandya	10	4	26	40
10	Hassan	10	12	23	45
11	D. Kannada	9	14	6	29
12	Belgaum	29	20	11	60
13	Bijapur	15	10	4	29
14	U Kannada	24	14	6	44
15	Koppal	4	4	16	44
16	Gulbarga	17	15	28	60
17	Bellary	8	14	21	43
18	Kolar	3	5	14	22
					700

No. of schools of APTECH, Bluemoon complex, M.G. Road, Bangalore

Sl No	Name of district	Cat A	Cat B	Cat C	Total
1	Bangalore South	4	17	14	25
2	Bidar	5	10	19	34
3	Raichur	7	12	18	37
4	Bagalkote	15	5	11	31
5	Gadag	7	8	3	18
6	Haveri	11	8	7	26
7	Dharwad	3	8	6	17
8	Chamarajnagar	1	2	18	21
9	Kodagu	6	6	6	18
10	Chickmagalur	14	8	12	23
					250

No. of schools to EDUCOMP Koramangala, Bangalore-34

Sl No	Name of district	Cat A	Cat B	Cat C	Total
1	Kolar	6	7	26	39
2	Chickmagalur	8	0	3	11
					50
	Total	**1000 Schools**			

ರಾಜ್ಯದಲ್ಲಿ ಅರೆಕಾಲಿಕ ಶಿಕ್ಷಕರುಗಳನ್ನು ಖಾಯಂಗೊಳಿಸುವುದು

260 (531) ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮಾಂಣ) - ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದ ಸರ್ಕಾರಿ ಪ್ರೌಢಶಾಲೆ ಮತ್ತು ಪದವಿ ಪೂರ್ವ ಕಾಲೇಜುಗಳಲ್ಲಿ ಸೇವೆ ಸಲ್ಲಿಸುತ್ತಿರುವ ಅರೆಕಾಲಿಕ ಶಿಕ್ಷಕರುಗಳ ಸಂಖ್ಯೆ ಎಷ್ಟು ;

ಆ) ಈ ಶಿಕ್ಷಕರುಗಳು ಎಷ್ಟು ವರ್ಷಗಳಿಂದ ಸೇವೆ ಸಲ್ಲಿಸುತ್ತಿದ್ದಾರೆ ; ಇವರುಗಳಿಗೆ ನೀಡುತ್ತಿರುವ ವೇತನ ಎಷ್ಟು ;

ಇ) ಈ ಶಿಕ್ಷಕರುಗಳನ್ನು ಯಾವಾಗ ಖಾಯಂಗೊಳಿಸಲಾಗುವುದು ?

ಪ್ರೊ।। ಬಿ.ಕೆ. ಚಂದ್ರಶೇಖರ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು)

ಅ)ಆ) ಸರ್ಕಾರಿ ಪ್ರೌಢ ಶಾಲೆಗಳಲ್ಲಿ 654 ಅರೆಕಾಲಿಕ ಶಿಕ್ಷಕರು ಸುಮಾರು ಕಳೆದ 10-12 ವರ್ಷಗಳಿಂದ ಸೇವೆ ಸಲ್ಲಿಸುತ್ತಿದ್ದಾರೆ.

ಪದವಿ ಪೂರ್ವ ಕಾಲೇಜುಗಳಲ್ಲಿ 19 ಅರೆಕಾಲಿಕ ಉಪನ್ಯಾಸಕರುಗಳು ಸುಮಾರು 5 ರಿಂದ 14 ವರ್ಷ ಸೇವೆ ಸಲ್ಲಿಸುತ್ತಿದ್ದಾರೆ. ಹುದ್ದೆಗೆ ನಿಗಧಿಯಾದ ಕನಿಷ್ಠ ವೇತನ ನೀಡಲಾಗುತ್ತಿದೆ.

ಇ) ಸದ್ಯಕ್ಕೆ ಈ ಪ್ರಸ್ತಾವನೆ ಸರ್ಕಾರದ ಮುಂದೆ ಇಲ್ಲ.

ಅನುದಾನಿತ ಕಾನೂನು ಕಾಲೇಜುಗಳ ಸಿಬ್ಬಂದಿಗೆ ಯು ಜಿ ಸಿ ವೇತನ

261 (532) ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮಾಂಣ) - ಮಾನ್ಯ ಪ್ರಾಥಮಿಕ ಮತ್ತು ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಅನುದಾನಿತ ಕಾನೂನು ಕಾಲೇಜುಗಳ ಸಂಖ್ಯೆ ಎಷ್ಟು ; ಇಲ್ಲಿ ಕೆಲಸ ಮಾಡುತ್ತಿರುವ ಸಿಬ್ಬಂದಿಗಳ ಸಂಖ್ಯೆ ಎಷ್ಟು ;

ಆ) ಇವರುಗಳಿಗೆ ಯು.ಜಿ.ಸಿ. ವೇತನವನ್ನು ನೀಡಲಾಗುತ್ತಿದೆಯೇ ; ಇಲ್ಲದಿದ್ದರೆ, ಕಾರಣವೇನು;

ಇ) ಈ ಅನುದಾನಿತ ಕಾನೂನು ಕಾಲೇಜುಗಳಿಗೆ ಯು.ಜಿ.ಸಿ. ವೇತನವನ್ನು ಯಾವಾಗಿನಿಂದ ಜಾರಿಗೊಳಿಸಲಾಗುವುದು ?

ಡಾ।। ಜಿ. ಪರಮೇಶ್ವರ್ (ಉನ್ನತ ಶಿಕ್ಷಣ ಸಚಿವರು)

ಅ) ಪ್ರಸ್ತುತ 08 ಅನುದಾನಿತ ಕಾನೂನು ಕಾಲೇಜುಗಳಿವೆ. ಒಟ್ಟು ಸಿಬ್ಬಂದಿಯ ಸಂಖ್ಯೆ 145.

ಆ) ಇಲ್ಲ